# ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮಳವಳ್ಳಿ

ಅಸಲು ದಾವ ಸಂಖ್ಯೆ: 16/2024

ವಾದಿ : ಎಂ.ಕೆ.ರಾಜೇಂದ್ರ

ವಿರುದ್ಧ

ಪ್ರತಿವಾದಿಗಳು : ತಿಮ್ಮಮ್ಮ ಹಾಗೂ ಇತರರು

**ವಾದಿಯ ಸಾಕ್ಷ್ಯ ವಿಚಾರಣೆ ಪ್ರಮಾಣಪತ್ರದ ಮುಖಾಂತರ**

| | | |
|---|---|---|
| ವಾದಿಯ ಹೆಸರು | : | ಎಂ.ಕೆ.ರಾಜೇಂದ್ರ |
| ತಂದೆಯ ಹೆಸರು | : | ಲೇಟ್ ಕಾಳೀರೇಗೌಡ |
| ವಯಸ್ಸು | : | ಸುಮಾರು 50 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಮೇಗಳಪುರ ಗ್ರಾಮ<br>ಕಸಬಾ ಹೋಬಳಿ, ಮಳವಳ್ಳಿ ತಾಲ್ಲೂಕು. |

PW1

ಈ ಮೇಲ್ಕಂಡ ದಾವೆಯ ವಾದಿಯಾದ ನಾನು ಈ ಮೂಲಕ ಘನ ನ್ಯಾಯಾಲಯದಲ್ಲಿ ನಿವೇದಿಸಿಕೊಳ್ಳುವುದೇನೆಂದರೇ,

ನಾನು ಮುಂದುವರೆದು ಹೇಳುವುದೇನೆಂದರೇ; ಮೃತ 1ನೇ ಪ್ರತಿವಾದಿಯು ವಾದಿ ಹಾಗೂ 2 ಮತ್ತು 3ನೇ ಪ್ರತಿವಾದಿಗಳ ತಾಯಿಯಾಗಿದ್ದು, ವಾದಿ ಹಾಗೂ 2 ಮತ್ತು 3ನೇ ಪ್ರತಿವಾದಿಗಳು ಕೂಡ ಒಡಹುಟ್ಟಿದ ಸಹೋದರ ಸಹೋದರಿಯಾಗಿರುತ್ತಾರೆ. 4ನೇ ಪ್ರತಿವಾದಿಯು 1 ನೇ ದಾವ ಷೆಡ್ಯೂಲ್ ಸ್ವತ್ತನ್ನು 2ನೇ ಪ್ರತಿವಾದಿಯಿಂದ ಉಳಿದ ಪ್ರತಿವಾದಿಗಳ ಹಾಗೂ ವಾದಿಯ ಸಮ್ಮತಿ ಇಲ್ಲದೆ ಕ್ರಯಕ್ಕೆ ಪಡೆದಿರುವ ವ್ಯಕ್ತಿಯಾಗಿದ್ದು ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲಾಗಿದೆ.

Copy Received
MS
Ad for D-3

ನಾನು ಮುಂದುವರೆದು ಹೇಳುವುದೇನೆಂದರೇ; ನಾನು ಹಾಗೂ 1 ರಿಂದ 3ನೇ ಪ್ರತಿವಾದಿಯರು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿರುತ್ತೇವೆ. ಮೃತ 1ನೇ ಪ್ರತಿವಾದಿಯ ಯಜಮಾನರಾದ ಹಾಗೂ ನನ್ನ ಹಾಗೂ 2 ಮತ್ತು 3ನೇ ಪ್ರತಿವಾದಿಯರ ತಂದೆಯಾದ ಕಾಳೀರೇಗೌಡ ರವರು ಈ ಕುಟುಂಬದ ಮೂಲ ಪುರುಷರಾಗಿದ್ದು ದಾವ ಷೆಡ್ಯೂಲ್ ಸ್ವತ್ತುಗಳು ಮೂಲತಹ ಅವರ ಹೆಸರಿನಲ್ಲಿ ಖಾತೆ ಇದ್ದ ಪಿತ್ರಾರ್ಜಿತವಾದ ಸ್ವತ್ತುಗಳಾಗಿರುತ್ತವೆ. ಅವರ ಕಾಲನಂತರ ಸದರಿ ಷೆಡ್ಯೂಲ್ ಸ್ವತ್ತುಗಳನ್ನು ಕುಟುಂಬದ ಹಿರಿಯನಾಗಿರುವ 3ನೇ ಪ್ರತಿವಾದಿಯು ತನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದು, ಸದರಿ ಷೆಡ್ಯೂಲ್ ಸ್ವತ್ತುಗಳ ಮೇಲೆ ನನ್ನ ಹಾಗೂ 1 ರಿಂದ 3ನೇ ಪ್ರತಿವಾದಿಗಳ ನಡುವೆ ಯಾವುದೇ ವಿಭಾಗ, ಪಾಲು ಪಾರಿಕತ್ ಆಗಲೀ ಏರ್ಪಟ್ಟಿರುವುದಿಲ್ಲ

ನಾನು ಮುಂದುವರೆದು ಹೇಳುವುದೇನೆಂದರೇ; 3ನೇ ಪ್ರತಿವಾದಿಯು ಷೆಡ್ಯೂಲ್ ಸ್ವತ್ತುಗಳ ಮೇಲೆ ಸಂಪೂರ್ಣ ಹಕ್ಕು ಹಾಗೂ ಸ್ವಾಧೀನಾನುಭವವನ್ನು ಹೊಂದಿದ್ದು ಷೆಡ್ಯೂಲ್ ಸ್ವತ್ತುಗಳಿಂದ ಬರುವ ಲಾಭಾಂಶವನ್ನು ಮರೆ ಮಾಚಿ ನನಗೆ ಸಂಪೂರ್ಣವಾಗಿ

NOTARY GOVT OF KARNATAKA

ಮೋಸ ಮಾಡುತ್ತಿರುತ್ತಾರೆ. 3ನೇ ಪ್ರತಿವಾದಿಯು ನನ್ನ ಅಣ್ಣನಾಗಿರುವ ಕಾರಣ ವಾದಿಯನ್ನು ಈ ವಿಚಾರವಾಗಿ ಪ್ರಶ್ನಿಸಿದೆ ಸುಮ್ಮನಿರುತ್ತಾರೆ.

ನಾನು ಮುಂದುವರೆದು ಹೇಳುವುದೇನೆಂದರೇ; ನನ್ನ ಮುಗ್ಧತೆಯನ್ನು ಬಂಡವಾಳ ಮಾಡಿಕೊಂಡ 3ನೇ ಪ್ರತಿವಾದಿಯು 30 ರಿಂದ 40 ಲಕ್ಷ ರೂ ಬೆಲೆ ಬಾಳುವ 1ನೇ ದಾವ ಷೆಡ್ಯೂಲ್ ಸ್ವತ್ತನ್ನು 4ನೇ ಪ್ರತಿವಾದಿಯ ಹೆಸರಿಗೆ ಷರೀಕ್ಕಾಗಿ ನನಗೆ ಗೊತ್ತಾಗದ ಆಗೆ ದಿನಾಂಕ 21.11.2019 ರಂದು ಅಕ್ರಮವಾಗಿ ಮಾರಾಟ ಮಾಡಿರುತ್ತಾರೆ. 3ನೇ ಪ್ರತಿವಾದಿಯು ತನ್ನ ಜೀವನವನ್ನು ವೈಭವಪೂರಿತವಾಗಿ ನಡೆಸುವ ದುರುದ್ದೇಶದಿಂದ 1ನೇ ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡುವ ಯಾವುದೇ ದರದ್ದು ಇಲ್ಲದಿದ್ದಾಗ್ಯು ಕೂಡ 1ನೇ ದಾವ ಷೆಡ್ಯೂಲ್ ಸ್ವತ್ತನ್ನು ನನ್ನ ಹಾಗೂ 1 ಮತ್ತು 2ನೇ ಪ್ರತಿವಾದಿಗಳ ಗಮನಕ್ಕೆ ಬಾರದ ಆಗೆ 4ನೇ ಪ್ರತಿವಾದಿಯ ಜೊತೆ ಷರೀಕ್ಕಾಗಿ ಮಾರಾಟ ಮಾಡಿರುತ್ತಾರೆ. ಸದರಿ ಕ್ರಯಪತ್ರದಲ್ಲಿ ನಾನು ಸೇರಿದಂತೆ ಇತರೆ ಪ್ರತಿವಾದಿಗಳು ಪಕ್ಷಗಾರರಾಗಿರುವುಲ್ಲ. ಸದರಿ 1ನೇ ದಾವ ಷೆಡ್ಯೂಲ್ ಸ್ವತ್ತಿನಲ್ಲಿ ನನಗೂ ಸಹ ಸಮಾನ ಭಾಗಾಂಶವಿದ್ದು ಇಂತಹ ಬೆಲೆ ಬಾಳುವ ಸ್ವತ್ತನ್ನು ತನ್ನ ದುಂದುವೆಚ್ಚಕ್ಕೆ ಮಾರಾಟ ಮಾಡಿರುವುದು ಕಾನೂನು ರಿತ್ಯ ಅಕ್ರಮ ಪರಭಾರೆ ಆಗಿರುತ್ತದೆ. 1ನೇ ದಾವ ಷೆಡ್ಯೂಲ್ ಸ್ವತ್ತು ಪಿತ್ರಾರ್ಜಿತವಾದ ಸ್ವತ್ತೆಂದು ತಿಳಿದ್ದಾಗ್ಯೂ ಕೂಡ 4ನೇ ಪ್ರತಿವಾದಿಯು ನನ್ನ ಹಾಗೂ ಇತರೆ ಪ್ರತಿವಾದಿಯರ ಒಪ್ಪಿಗೆ ಹಾಗೂ ಅವರನ್ನು ಪಕ್ಷಗಾರರನ್ನಾಗಿ ಮಾಡಿಕೊಳ್ಳದೆ 3ನೇ ಪ್ರತಿವಾದಿಯ ಜೊತೆ ಷರೀಕ್ಕಾಗಿ 1ನೇ ದಾವ ಷೆಡ್ಯೂಲ್ ಸ್ವತ್ತನ್ನು ಅಕ್ರಮವಾಗಿ ಕ್ರಯಕ್ಕೆ ಪಡೆದಿರುವುದು ಕಾನೂನು ರಿತ್ಯ ಅಸಿಂಧುವಾಗಿರುತ್ತದೆ. ಈ ಕ್ರಯಪತ್ರವು 1ನೇ ದಾವ ಷೆಡ್ಯೂಲ್ ಸ್ವತ್ತಿನ ಮೇಲೆ ನನಗಿರುವ ಭಾಗಾಂಶವನ್ನು ಮೊಟಕುಗೊಳಿಸುವುದಿಲ್ಲ. ಆದಕಾರಣ ಸದರಿ ಸ್ವತ್ತಿನಲ್ಲಿಯೂ ನನಗೆ ಭಾಗಾಂಶದ ಹಕ್ಕಿರುತ್ತದೆ.

ನಾನು ಮುಂದುವರೆದು ಹೇಳುವುದೇನೆಂದರೇ; 3ನೇ ಪ್ರತಿವಾದಿಯು 4ನೇಪ್ರತಿವಾದಿಯ ಹೆಸರಿಗೆ 1ನೇ ದಾವ ಷೆಡ್ಯೂಲ್ ಸ್ವತ್ತನ್ನು ನನ್ನ ಗಮನಕ್ಕೆ ಬಾರದೆ ಅಕ್ರಮವಾಗಿ ಮಾರಾಟ ಮಾಡಿರುವ ವಿಚಾರವು ಗ್ರಾಮದ ಹಿತೈಷಿಗಳಿಂದ ನಾನು ತಿಳಿದುಕೊಂಡ ಬಳಿಕ ದಾಖಲಾತಿಗಳನ್ನು ಪರಿಶೀಲಿಸಲಾಗಿ ಸದರಿ ಸ್ವತ್ತು 4ನೇ ಪ್ರತಿವಾದಿಯ ಹೆಸರಿಗೆ ಸಂಬಂಧಪಟ್ಟ ಹಾಡ್ಲಿ ಗ್ರಾಮ ಪಂಚಾಯಿತಿ ಖಾತೆಯಾಗಿರುವುದು ಕಂಡು ಬಂದಿರುತ್ತದೆ. ಈ ವಿಚಾರವಾಗಿ ನಾನು 3 ಮತ್ತು 4ನೇ ಪ್ರತಿವಾದಿಯರನ್ನು ಖುದ್ದು ಪ್ರಶ್ನಿಸಲಾಗಿ 3 ಮತ್ತು 4ನೇ ಪ್ರತಿವಾದಿಯರು ಅಸಡ್ಡೆಯ ಉತ್ತರವನ್ನು ನೀಡಿರುತ್ತಾರೆ. ಬೆಲೆ ಬಾಳುವ 1ನೇ ದಾವ ಷೆಡ್ಯೂಲ್ ಸ್ವತ್ತನ್ನು ಯಾವುದೇ ತುರ್ತು ಅವಶ್ಯಕತೆ ಇಲ್ಲದೆ 3ನೇ ಪ್ರತಿವಾದಿಯು 4ನೇ ಪ್ರತಿವಾದಿಯ ಹೆಸರಿಗೆ ಅಕ್ರಮ ಮಾರಾಟ ಮಾಡಿರುವ ವಿಚಾರವನ್ನು ನಾನು ಕಳೆದ 2024 ರ ಅಕ್ಟೋಬರ್ ತಿಂಗಳ ಕಡೆಯ ವಾರದಲ್ಲಿ ಗ್ರಾಮದ

NOTARY M. BASAVARAJU Area MALAVALLI Revenue Taluk Reg. No. Law ... LCL69 Expiry: 5-4-2027 GOVT. OF KARNATAKA

ಪಂಚಾಯಿತಿದಾರರ ಸಮಕ್ಷಮ ಪ್ರಶ್ನಿಸಿ ದಾವ ಷೆಡ್ಯೂಲ್‌ಗಳಲ್ಲಿ ತನಗಿರುವ ಭಾಗಾಂಶವನ್ನು ನೀಡುವಂತೆ ಪ್ರತಿವಾದಿಯರಲ್ಲಿ ಮನವಿ ಮಾಡಿರುತ್ತೇನೆ. ಸದರಿ ಮನವಿಯನ್ನು ಪ್ರತಿವಾದಿಯರು ತಿರಸ್ಕರಿಸಿದ ಕಾರಣ ನನಗೆ ಬೇರೆ ಮಾರ್ಗ ತೋಚದೆ ನಾನು ದಾವ ಷೆಡ್ಯೂಲ್ ಸ್ವತ್ತುಗಳ ಮೇಲೆ ತನಗಿರುವ ಭಾಗಾಂಶದ ಹಕ್ಕನ್ನು ನೀಡುವಂತೆ ಪ್ರತಿವಾದಿಯರಿಗೆ ನನ್ನ ವಕೀಲರ ಮುಖೇನ ದಿನಾಂಕ 27.11.2023 ರಂದು ತಿಳುವಳಿಕೆ ನೋಟಿಸನ್ನು ನೀಡಿದ್ದು, ಸದರಿ ನೋಟಿಸು ಪ್ರತಿವಾದಿಯರಿಗೆ ಜಾರಿಯಾಗಿದ್ದಾಗ್ಯೂ ಕೂಡ ನೋಟಿಸಿಗೆ ಪ್ರತ್ಯುತ್ತರವನ್ನು ನೀಡದೆ ಹಾಗೂ ದಾವ ಷೆಡ್ಯೂಲ್ ಸ್ವತ್ತುಗಳಲ್ಲಿ ನನಗೆ ಭಾಗಾಂಶವನ್ನು ಸಹ ನೀಡದ ಕಾರಣ ಸದರಿ ದಾವೆಯನ್ನು ನಾನು ಪ್ರತಿವಾದಿಯರ ವಿರುದ್ಧ ತಂದಿರುತ್ತೇನೆ.

ನಾನು ಮುಂದುವರೆದು ಹೇಳುವುದೇನೆಂದರೇ; ನಾನು ಈಗಾಗಲೇ ಘನ ನ್ಯಾಯಾಲಯದ ಮುಂದೆ ದಾಖಲಾತಿಗಳನ್ನು ಸಲ್ಲಿಸಿದ್ದು ಸದರಿ ದಾಖಲಾತಿಗಳನ್ನು ನನ್ನ ಪರ ನಿಶಾನೆಗಳಾಗಿ ಗುರುತಿಸಬೇಕೆಂದು ಕೋರುತ್ತೇನೆ.

ಆದುದರಿಂದ ಮಾನ್ಯ ಘನ ನ್ಯಾಯಾಲಯದಲ್ಲಿ ಈ ಮೂಲಕ ಪ್ರಾರ್ಥಿಸಿಕೊಳ್ಳುವುದೇನೆಂದರೇ, ನನ್ನ ದಾವಪತ್ರದಲ್ಲಿನ ಅಂಶಗಳನ್ನು ಈ ಪ್ರಮಾಣಪತ್ರದ ಅಂಶಗಳಾಗಿಯೂ ಪರಿಗಣಿಸಬೇಕೆಂದು ಹಾಗೂ ದಾವ ಪತ್ರದಲ್ಲಿ ಕೇಳಿರುವಂತೆ ನನ್ನ ಪರವಾಗಿ ತೀರ್ಪು ಹಾಗೂ ಡಿಕ್ರಿಯನ್ನು ನೀಡಬೇಕೆಂದು ನ್ಯಾಯ ಹಾಗೂ ಸಮಾನತೆಯ ದೃಷ್ಟಿಯಿಂದ ಪ್ರಾರ್ಥನೆ.

ಮೇಲೆ ಹೇಳಿರುವ ಎಲ್ಲಾ ಅಂಶಗಳು ಪ್ರಮಾಣಪೂರ್ವಕವಾಗಿ ಸತ್ಯವಾಗಿರುತ್ತದೆ.

ಗುರುತಿಸುವವರು

[signature]

ವಕೀಲರು, ಮಳವಳ್ಳಿ

[signature]

ಪ್ರಮಾಣೀಕರಿಸುವವರು

ದಿನಾಂಕ: [illegible]0.06.2026

ಸ್ಥಳ: ಮಳವಳ್ಳಿ

NOTARY
M. BASAVARAJU
Area MALAVALLI
Revenue Taluk
Reg. No. Law 44
LCL99
Expiry: 5-4-2027
GOVT. OF KARNATAKA

SWORN TO BEFORE ME

[signature] 20/6/20

M. BASAVARAJU
B.A., L.L.B
ADVOCATE & NOTARY
Malavalli 571 430
Mandya Dist